4. ಪುಷ್ಪೋದ್ಯಮದ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.
5. ರಾಜ್ಯದಲ್ಲಿನ ರೈತ ಸಂಪರ್ಕ ಕೇಂದ್ರಗಳಿಂದ ಮಾರುಕಟ್ಟೆ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ.
6. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕೆಪೆಕ್ ಸಂಸ್ಥೆಯನ್ನು ಸ್ಥಾಪಿಸಿದೆ. ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ. ವತಿಯಿಂದ ಹೂವು ಹರಾಜು ಕೇಂದ್ರವನ್ನು ಸ್ಥಾಪಿಸಲಾಗಿದೆ.
7. ಕೊಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಛಕ್ತಿ ಪ್ರತಿ ಯೂನಿಟ್‌ಗೆ 1/– ರೂ. ಸಹಾಯ ಧನ ನೀಡಲಾಗುತ್ತಿದೆ.
8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೇಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣಕಾಸಿನ ನೆರವನ್ನು ತೋಟಗಾರಿಕೆ ಉತ್ಪನ್ನಗಳ ಉತ್ಪನ್ನಗಳ ಉತ್ಪಾದನೆ, ಶೇಖರಣೆ ಹಾಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ.
9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕುಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಈ) ಮೇಲಿನಂತೆ

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಪಡಿತರ ಕಾರ್ಡು ನೀಡಿಕೆ

3199 (3699) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಈವರೆಗೆ ನೀಡಲಾಗಿದ್ದ ಪಡಿತರ ಕಾರ್ಡುಗಳ ಸಂಖ್ಯೆ ಎಷ್ಟು? ಕ್ಷೇತ್ರವಾರು ಹಾಗೂ ಗ್ರಾಮವಾರು ವಿವರ ನೀಡುವುದು.

ಆ) ಇತ್ತೀಚಿನ ಬಿಪಿಎಲ್ ಪಟ್ಟಿ ಪ್ರಕಾರ ನೀಡಲು ಉದ್ದೇಶಿಸಲಾಗಿರುವ ಕಾರ್ಡುಗಳ ಸಂಖ್ಯೆ ಎಷ್ಟು? ಕ್ಷೇತ್ರವಾರು ಹಾಗೂ ಗ್ರಾಮವಾರು ವಿವರ ನೀಡುವುದು

ಈ) ಬಿಪಿಎಲ್ ಪಟ್ಟಿಯನ್ನು ಯಾವ ಮಾನದಂಡದ ಮೇಲೆ ಮಾಡಲಾಗಿದೆ; ಹಾಗೂ ಬಿಪಿಎಲ್ ಪಟ್ಟಿಯಲ್ಲಿ ಕೈಬಿಟ್ಟು ಹೋಗಿರುವ ಬಡ ಫಲಾನುಭವಿಗಳ ಅನುಕೂಲಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು? ವಿವರ ನೀಡುವುದು.

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಹಾಲಿ ನೀಡಿರುವ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ.

ಜಿಲ್ಲೆಯ ಹೆಸರು	ಹಸಿರು	ಅಂತ್ಯೋದಯ ಅನ್ನ	ಹಳದಿ	ಎ.ಪಿ.ಎಲ್.	ಒಟ್ಟು
ಮೈಸೂರು	234720	21148	72375	279068	607309
ಚಾಮರಾಜನಗರ	161398	15573	–	61893	238864

ಆ) ಮನೆಮನೆ ಸಮೀಕ್ಷೆಯ ನಂತರ ಮೈಸೂರಿನಲ್ಲಿ 201071 ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 95515 (ಇದರಲ್ಲಿ ಅಂತ್ಯೋದಯ ಅನ್ನ ಯೋಜನೆ ಸಹಿತ) ಕುಟುಂಬಗಳನ್ನು ಅರ್ಹ ಬಿ.ಪಿ.ಎಲ್ ಫಲಾನುಭವಿಗಳೆಂದು ಗುರುತಿಸಲಾಗಿದೆ.

ಇ) ಮನೆಮನೆ ಸಮೀಕ್ಷೆಯನ್ನು ಮಾಡಿದ ನಂತರ ಕುಟುಂಬದ ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ರೂ. 12,000/– ಅಥವಾ ಅದಕ್ಕಿಂತ ಕಡಿಮೆ ಆದಾಯ ಮಿತಿಯನ್ನು ಹಾಗೂ ನಗರ/ಪಟ್ಟಣ ಪ್ರದೇಶಗಳಲ್ಲಿ ವಾರ್ಷಿಕ ರೂ. 17,000/– ಅಥವಾ ಅದಕ್ಕಿಂತ ಕಡಿಮೆ ಆದಾಯ ಮಿತಿಯನ್ನು ಹೊಂದಿರುವ ಕುಟುಂಬಗಳನ್ನು ಫಲಾನುಭವಿಗಳಾಗಿ ಆಯ್ಕೆ ಮಾಡಲಾಗಿದೆ.

ಈಗಾಗಲೇ ಮನೆ ಮನೆ ಸಮೀಕ್ಷೆಯಲ್ಲಿ ಬಿಟ್ಟು ಹೋಗಿರುವ ಅರ್ಹ ಬಿ.ಪಿ.ಎಲ್. ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿತ್ತು ಮತ್ತು ದಿ: 16.06.2003ರವರೆಗೆ ಕಾಲಾವಕಾಶವನ್ನು ನೀಡಲಾಗಿತ್ತು. ಈ ವಿಸ್ತರಿಸಿದ ಅವಧಿಯೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿ ನೀಡಲಾಗುವುದು.

ಕಬಿನಿ ಏತ ನೀರಾವರಿ ಸರ್ವೇಕಾರ್ಯ ಮತ್ತು ಹೊಂಗನೂರು ಹಿರಿಕೆರೆ ಯೋಜನೆ

3200 (3701) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಬಿನಿ ಏತ ನೀರಾವರಿ ಸರ್ವೆ ಕಾರ್ಯವನ್ನು ಯಾರಿಗೆ ಎಷ್ಟು ಮೊಬಲಗಿಗೆ ಟೆಂಡರ್ ನೀಡಲಾಗಿತ್ತು. ಸದರಿ ಸರ್ವೆ ಕಾರ್ಯ ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆಯೆ; ನಿಗದಿ ಪಡಿಸಿದ್ದಲ್ಲಿ ಯಾವಾಗ ಈ ಸರ್ವೆ ಕಾರ್ಯ ಪೂರ್ಣಗೊಳಿಸಬೇಕಾಗಿರುತ್ತದೆ; ವಿವರ ನೀಡುವುದು;

ಆ) ಈ ವರೆವಿಗೆ ಎಷ್ಟು ಕಿ.ಮೀ. ಸರ್ವೆ ಕಾರ್ಯ ಪೂರ್ಣಗೊಳಿಸಲಾಗಿರುತ್ತದೆ; ಉಳಿದ ಸರ್ವೆ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಹಾಗೂ ಪೂರ್ಣ ಪ್ರಮಾಣದ ಸರ್ವೆ ಕಾರ್ಯಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು; ವಿವರ ನೀಡುವುದು;

ಇ) ಹೊಂಗನೂರು–ಹಿರೀಕೆರೆ ಏತ ನೀರಾವರಿ ಯೋಜನೆಯ ಕಾರ್ಯ ಯಾವ ಹಂತದಲ್ಲಿ ಇದೆ; ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು; ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕಬಿನಿ ಏತ ನೀರಾವರಿಯ ಸರ್ವೆ ಕಾರ್ಯವನ್ನು ಮೆ॥ ಅಮೀನ್ ಬಾವಿ ಮತ್ತು ಹೆಗ್ಗಡೆ, ಕನ್ಸಲ್ಟಿಂಗ್ ಇಂಜಿನಿಯರ್, ಧಾರವಾಡ ಇವರಿಗೆ ಟೆಂಡರ್ ಆಧಾರದ ಮೇಲೆ ರೂ. 33.81 ಲಕ್ಷಗಳಿಗೆ ವಹಿಸಲಾಗಿದೆ. ಈ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ 31–12–02 ವರೆಗೆ ಕಾಲಮಿತಿಯನ್ನು ನಿಗಧಿ ಪಡಿಸಲಾಗಿತ್ತು.